ಆ ಕಾನನದ ವರ್ಣಮಯ ಪರಿಸರದೊಳಗೆ ಅರುಣ ಕಿರಣಗಳ ಆಗಮನವಾಗಿ ಅವುಗಳು ಹೊಳೆಯುತ್ತಿದ್ದವು. ಕೋಮಲವಾದ ಮೊಗ್ಗುಗಳು ಹಾಗೂ ಬಿರಿದ ಹೂಗಳ ದಳಗಳು ವಸಂತದ ಪವನನ ಕಾಲಿನ ಹಾಗೆ ಅದುರುತ್ತಿದ್ದವು. ಹಳದಿ ಬಣ್ಣದ ಪರಾಗದ ಸುಗಂಧ ದ್ರವ್ಯದಲ್ಲಿ ಮುಳುಗಿದ್ದ ಕಿರಣಗಳು ಹಳದಿಯಾದವು. ಅದು ವಸಂತದ ಒಂದು ಸುಂದರ ಮುಂಜಾವು ಆಗಿತ್ತು.

ಯುವತಿ ಕಾಮಿನಿ ತೋಟಗಾತಿಯಾಗಿ ಕೆಲಸ ಮಾಡುತ್ತಿದ್ದಳು. ಆಕೆಗೆ ತನ್ನವರೆನ್ನುವವರು ಯಾರೂ ಇರಲಿಲ್ಲ. ಆಕೆ ಹೂದೋಟದಿಂದ ಹೂಗಳನ್ನು ಆರಿಸಿ ತಂದು ಮಾಲೆ ಮಾಡಿ ಮಾರಿ ಜೀವನ ಸಾಗಿಸುತ್ತಿದ್ದಳು. ಒಮ್ಮೊಮ್ಮೆ ಸಂಪಾದನೆ ಇಲ್ಲದೆ ಉಪವಾಸವೂ ಬೀಳಬೇಕಾಗುತ್ತಿತ್ತು. ಆದರೆ ಆಕೆ ಹೂಮಾಲೆ ಮಾಡುವ ತನ್ನ ಕಾಯಕವನ್ನು ಎಂದೂ ಬಿಟ್ಟಿರಲಿಲ್ಲ. ಇಂದೂ ಸಹ ಆಕೆ ಹೂವಿನಿಂದ ತುಂಬಿದ್ದ ಕಂಚಿವಾಳ ಮರದ ಕೆಳಗೆ ಕುಳಿತಿದ್ದಳು. ಅರೆ ಬಿರಿದ ಸುಂದರ ಹೂಗಳನ್ನು ಚುಚ್ಚದೇ ಗಂಟು ಹಾಕಿ ಮಾಲೆ ಮಾಡುತ್ತಿದ್ದಳು. ದುಂಬಿಗಳು ಬಂದು ಝೇಂಕರಿಸಿ ಹಾರಿಹೋದವು. ವಸಂತನ ಆ ದೂತರ ಸಂದೇಶವನ್ನು ಆಕೆ ಕೇಳಿಸಿಕೊಳ್ಳಲಿಲ್ಲ. ಮಲಯ ಪವನ ಬೀಸುತ್ತ ಬಂದು ಆಕೆಯ ಸೆರಗನ್ನು ಹಾರಿಸಿ ಕೆದಕಿ ಹರಡಿ ಹೊರಟುಹೋದ.

ಆಕೆ ಮಾತ್ರ ಮೈಮೇಲೆ ಎಚ್ಚರವಿಲ್ಲದವಳ ಹಾಗೆ ಗಂಟು ಹಾಕುತ್ತಾ ಹೂಗಳನ್ನು ಕಟ್ಟುವ ಕೆಲಸದಲ್ಲಿ ಮಗ್ನಳಾಗಿದ್ದಳು.

ಅತ್ಯಂತ ವೇಗವಾಗಿ ಓಡುವ ಕುದುರೆಯ ಹೆಜ್ಜೆಯ ಸದ್ದು ಆಕೆಯನ್ನು ವಿಚಲಿತಳಾಗುವಂತೆ ಮಾಡಿತು. ಆಕೆ ತನ್ನ ಹೂವಿನ ಬುಟ್ಟಿಯನ್ನು ಎತ್ತಿಕೊಂಡು ಭಯಭೀತಳಾಗಿ ತಲೆತಗ್ಗಿಸಿ ಒಂದು ಬದಿಗೆ ಸರಿದು ನಿಂತಳು.

